**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿಃ08-06-2026**

**ಪಾಟೀ ಸವಾಲುಃ ಆರೋಪಿತನ ಪರ ಶ್ರೀ ವಿ ಕೆ ಆರ್ ವಕೀಲರಿಂದ**

ಗುಡ್ ವಿಲ್ ಬೆಳೆ ಪರಿಹಾರಕ್ಕೆ ಸಂಬಂದಪಟ್ಟ ದಾಖಲೆಗಳು ನನ್ನ ಉಡುಪಿಯಲ್ಲಿರುವ ಕಚೇರಿಯಲ್ಲಿ ಇದೆ. ನಾನು ಅದನ್ನು ನೋಡಿದ್ದೇನೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಪಿರ್ಯಾದಿ ಸಲ್ಲಿಸಲು ನಾನೇ ಮಾಹಿತಿ ನೀಡಿರುತ್ತೇನೆ. ಪಿರ್ಯಾದಿಗೆ ನೀಡಿದ ಮಾಹಿತಿಯ ಬಗ್ಗೆ ಪಿರ್ಯಾದುದಾರರಾದ ಜಿ ಶಂಕರ್ ರವರಿಗೆ ತಿಳಿದಿದೆ. ಆರೋಪಿಯ ಜಮೀನಿಗೆ ಸಂಬಂದಪಟ್ಟಂತೆ ಆಗಿರುವಂತಹ ನೇರ ಕ್ರಯಪತ್ರಗಳ ಬಗ್ಗೆ ನನಗೆ ಖುದ್ದು ಮಾಹಿತಿ ಇದೆ. ನೇರ ಕ್ರಯಪತ್ರದ ಮೂಲಕ ಪರಿಹಾರವು ಯಾರ ಸ್ವತ್ತು ಭೂಸ್ವಾದೀನಗೊಳಿಸಲಾಗಿದೆಯೋ ಅವರ ಖಾತೆಗೆ ಜಮೆಯಾಗುತ್ತದೆ ಎಂದರೆ ಸರಿ. 2019 ರೊಳಗೆ ಆರೋಪಿಯ ಜಮೀನು ನೇರ ಖರೀದಿಯಾಗಿತ್ತು. ಆ ರೀತಿ ನೇರ ಖರೀದಿಯಾದ ನಂತರ ಪರಿಹಾರದ ಮೊತ್ತವು ಸಹ ಆರೋಪಿಗೆ ಸಿಕ್ಕಿತ್ತು ಎಂದರೆ ಸರಿ. ಆರೋಪಿಗೆ ಸಂಬಂದಪಟ್ಟ 60/1 ರ ಜಮೀನನ್ನು ಹೊರತುಪಡಿಸಿ, ಬೇರೆ ಯಾವುದೇ ಜಮೀನುಗಳು ಭೂಸ್ವಾಧೀನಗೊಳಿಸಲಾಗಿರಲಿಲ್ಲ. ಆರೋಪಿಗೆ ಸರಕಾರದಿಂದ ಪರಿಹಾರದ ಹಣ ಬರಲು ಬಾಕಿ ಇತ್ತೇ ಎಂದರೆ ನನಗೆ ಗೊತ್ತಿಲ್ಲ. ನನ್ನ ಪಿರ್ಯಾದಿಯಲ್ಲಿ ಆರೋಪಿಗೆ ನಾವು ಹಣ ನೀಡುವ ಸಮಯದಲ್ಲಿ ಅವರಿಗೆ ಪರಿಹಾರದ ಹಣ ಬಂದಿರಲಿಲ್ಲ ಎಂದು ಹೇಳಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಪರಿಹಾರದ ಹಣ ನಾವು ಹಣ ಕೊಡುವ ಸಮಯದಲ್ಲಿ ಬಂದಿರಲಿಲ್ಲ ಎನ್ನುತ್ತಾರೆ. ಸಾಕ್ಷಿದಾರರಿಗೆ ದಿಃ 12.07.2018 ರ ಕ್ರಯಪತ್ರದ ದೃಡೀಕೃತ ನಕಲನ್ನು ತೋರಿಸಲಾಗಿ ಸಾಕ್ಷಿದಾರರು ಅದನ್ನು ನೋಡಿ ಒಪ್ಪಿಕೊಂಡಿದ್ದರಿಂದ ಸದರಿ ದಾಖಲೆಯನ್ನು ನಿಡಿ.4 ಎಂದು ಗುರುತಿಸಲಾಯಿತು. ಆರೋಪಿಗೆ ಪರಿಹಾರದ ಹಣವನ್ನು ಯಾವ ರೀತಿ ನೀಡಲಾಗಿದೆ ಎಂದು ನಿಡಿ.4 ರಲ್ಲಿ ನಮೂದು ಮಾಡಿರುತ್ತಾರೆ ಎಂದರೆ ಸರಿ. ಆರೋಪಿಗೆ ನಾವು ಹಣ ನೀಡುವ ಸಮಯದಲ್ಲಿ ಪರಿಹಾರದ ಹಣ ಬಂದಿರಲಿಲ್ಲ ಎಂದು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿ ಪಿರ್ಯಾದಿಯಲ್ಲಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಪಿರ್ಯಾದುದಾರರು ಆರೋಪಿಗೆ ಹಣ ನೀಡಿರುವ ಬಗ್ಗೆ ಆಡಿಟ್ ನಲ್ಲಿ ದಾಖಲಾಗಿರುವ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ. ಅವುಗಳನ್ನು ಮುಂದಿನ ದಿನಾಂಕಗಳಂದು ಹಾಜರುಪಡಿಸುತ್ತೇನೆ. ಸಾಲಕ್ಕಾಗಿ ಹಣ ನೀಡುತ್ತಿರುವುದಾಗಿ ದಾಖಲೆಗಳನ್ನು

ಮಾಡಿಕೊಂಡಿದ್ದೆವೆಯೋ ಇಲ್ಲವೋ ಎಂದು ನನಗೆ ಈಗ ನೆನಪಿಲ್ಲ. ಈ ಪ್ರಕರಣಕ್ಕೆ ಸಂಬಂದಪಟ್ಟ ಎಲ್ಲಾ ದಾಖಲೆಗಳನ್ನು ನಾನು ನನ್ನ ವಕೀಲರಿಗೆ ನೀಡಿರುತ್ತೇನೆ. ಆರೋಪಿ ನೀಡಿರುವ ಪ್ರತ್ಯೂತ್ತರವನ್ನು ಓದಿದ್ದೇನೆ, ಆದರೆ ಈಗ ನೆನಪಿಲ್ಲ. ಆರೋಪಿಯು 22,82,683/- ರೂ ಹಣವನ್ನು ಯಾವ ಕಾರಣಕ್ಕಾಗಿ ಪಿರ್ಯಾದುದಾರರು ಆರೋಪಿಗೆ ನೀಡಿರುತ್ತಾರೆ ಎಂದು ತಮ್ಮ ಪ್ರತ್ಯೂತ್ತರದಲ್ಲಿ ನೀಡಿರುತ್ತಾರೆ ಎಂದರೆ ಸರಿ. ಆರೋಪಿಯು ಹಣ ನೀಡಿದ ಕಾರಣವನ್ನು ಪ್ರತ್ಯೂತ್ತರದಲ್ಲಿ ತಿಳಿಸಿರುವುದು ತಪ್ಪಾಗಿದೆ. ಆರೋಪಿಗೆ ಯಾವ ಖಾತೆಯಿಂದ ಡಿ ಡಿ ಮೂಲಕ ಹಣವನ್ನು ನೀಡಲಾಗಿದೆ, ಅದೇ ಖಾತೆಯಿಂದ ಉಳಿದ ರೈತರಿಗೂ ಸಹ ಹಣವನ್ನು ನೀಡಲಾಗಿರುತ್ತದೆ ಎಂದರೆ ಈ ಖಾತೆಯಿಂದಲೂ ಮತ್ತು ಬೇರೆ ಖಾತೆಯಿಂದಲೂ ಸಹ ರೈತರಿಗೆ ಪಿರ್ಯಾದುದಾರರು ಹಣವನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಗುಡ್ ವಿಲ್ ಮತ್ತು ಬೆಳೆ ಪರಿಹಾರವನ್ನು ಪಡೆದುಕೊಂಡ ಎಲ್ಲಾ ರೈತರಿಗೂ ಸಹ ಡಿ ಡಿ ಮೂಲಕವೇ ಹಣ ಪಾವತಿ ಮಾಡಲಾಗಿದೆ ಎಂದರೆ ಸರಿ. ಆರೋಪಿಗೆ ಚೆಕ್ ಮೂಲಕ ಹಣ ಕೊಡಲು ತೊಂದರೆ ಇರಲಿಲ್ಲ. ಅದರೆ ನಮಗೆ ದಾಖಲಾತಿ ಬೇಕಾಗಿರುವುದರಿಂದ ನಾವು ಡಿ.ಡಿ ಮೂಲಕ ಹಣ ಪಾವತಿ ಮಾಡಿರುತ್ತೇವೆ. ದಿಃ 07.08.2021 ರಲ್ಲಿ ಪಾಟೀ ಸವಾಲು ಮಾಡುವ ಸಮಯದಲ್ಲೇ ಆಡಿಟ್ ವರದಿಯನ್ನು ಹಾಜರುಪಡಿಸುವಂತೆ ಕೇಳಿದ್ದರೂ ಸಹ ಇದುವರೆಗೆ ಉದ್ದೇಶಪೂರ್ವಕವಾಗಿ ಅದನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಕೊಡಬಾರದೆಂಬ ಉದ್ದೇಶ ಇಲ್ಲ, ಆದರೆ ತಡವಾಗಿದೆ ಎಂದು ನುಡಿಯುತ್ತಾರೆ. ನಿಡಿ.3 ರಲ್ಲಿರುವ ಷರತ್ತು ಮತ್ತು ನಿಬಂದನೆಗಳಲ್ಲಿ 2ನೇ ನಿಬಂಧನೆ ಪ್ರಕಾರ ಬೆಳೆ ಪರಿಹಾರ ನಿಯಮಾನುಸಾರ ನಿರ್ಧರಣೆ ಮಾಡಿ ಪಾವತಿ ಮಾಡಲು ಪಿರ್ಯಾದುದಾರರಾಗಿ ನಿರ್ದೇಶವನ್ನು ನೀಡಲಾಗಿತ್ತು ಎಂದರೆ ಸರಿ. ನಿಪಿ.2 ರ ಬರವಣಿಗೆ ಮತ್ತು ಸಹಿಯ ಶಾಯಿಗೆ ವ್ಯತ್ಯಾಸ ಇದೆ ಎಂದರೆ ಸರಿ. ನಿಪಿ.2 ರಲ್ಲಿರುವ ಬರವಣಿಗೆ ಆರೋಪಿಯದಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ.2 ರಲ್ಲಿ ಯಾರು ಬರವಣಿಗೆ ಮಾಡಿರುತ್ತಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ನಿಪಿ.2 ನ್ನು ಜನವರಿ 2019 ರಲ್ಲಿ ನಾನು ಮೊದಲ ಬಾರಿಗೆ ನಮ್ಮ ಕಚೇರಿಯಲ್ಲಿ ನೋಡಿರುತ್ತೇನೆ. ನಿಪಿ.2 ನಮ್ಮ ಲೆಕ್ಕಾಧಿಕಾರಿಯ ಬಳಿಯಿತ್ತು. ನನಗೆ ಚೆಕ್ ನ್ನು ಯಾರು ಕೊಟ್ಟಿರುತ್ತಾರೆ ಎಂದು ಹೇಳಲು ಸಾದ್ಯವಿಲ್ಲ, ನನ್ನ ಕಚೇರಿಯ ಮೂಲಕ ನನಗೆ ಚೆಕ್ ಸಿಕ್ಕಿರುತ್ತದೆ. ಯಾವುದೇ ದಾಖಲಾತಿ ಮತ್ತು ಚೆಕ್ ನ್ನು ಕಚೇರಿಯಿಂದ ಸ್ವೀಕಾರ ಮಾಡಿದಲ್ಲಿ ಅದನ್ನು ಯಾರು ಯಾವ ಉದ್ದೇಶಕ್ಕಾಗಿ ಕೊಟ್ಟಿರುತ್ತಾರೆ ಎಂದು ನಮೂದು ಮಾಡಿಕೊಳ್ಳಲಾಗುತ್ತದೆ ಎಂದರೆ ಸರಿ. ಯಾವ ಕಾರಣಕ್ಕಾಗಿ ನಿಪಿ.2ನ್ನು ನಮ್ಮ ಕಚೇರಿಗೆ ನೀಡಲಾಗಿದೆ ಎಂದು ನಾನು ದಾಖಲೆಗಳನ್ನು ಪರಿಶೀಲಿಸಿಲ್ಲ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಸಾದ್ಯವಿಲ್ಲ ಏಕೆಂದರೆ ಅವು ಈಗ ಲಭ್ಯವಿರುವುದಿಲ್ಲ.

ಆರೋಪಿಗೆ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಸಾಲ ಪಡೆದುಕೊಳ್ಳಲು ಯಾವುದೇ ಪ್ರಮೇಯ ಉದ್ಭವವಾಗಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿ 15 ಎಕರೆ ಕಾಫಿ ತೋಟ ಮತ್ತು 5-6 ಎಕರೆ ಗದ್ದೆಯನ್ನು ಹೊಂದಿರುವಂತಹ ಭೂ ಮಾಲೀಕರಾಗಿರುತ್ತಾರೆ ಎಂದರೆ ಇರಬಹುದು. ಆರೋಪಿಯು ಆರ್ಥಿಕವಾಗಿ ಸುಸ್ಥಿತಿಯಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಪಡೆದಿರುವಂತಹ ಹಣ 22,82,683/- ರೂಗಳು ನಾವು ಗುಡ್ ವಿಲ್ ಮತ್ತು ಬೆಳೆ ಪರಿಹಾರವಾಗಿ ಅವರಿಗೆ ನೀಡಿರುವಂತಹ ಹಣವಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿಗೆ ಪ್ರಶ್ನಿತ ಹಣದ ಹೊರತಾಗಿ ಪ್ರತ್ಯೇಕವಾಗಿ ಬೆಳೆ ಪರಿಹಾರದ ಹಣವನ್ನು ನೀಡಿದ್ದೇವೆ ಎಂದು ತೋರಿಸಲು ನಮ್ಮ ಬಳಿ ದಾಖಲೆ ಇದ್ದು, ಅದನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ.

ತುರ್ತಾಗಿ ಕೆಲಸ ಮುಗಿಸಬೇಕೆಂಬ ಸರಕಾರದ ನಿರ್ದೇಶದ ಮೇರೆಗೆ ತ್ರಿಪಕ್ಷೀಯ ಕರಾರನ್ನು ಮಾಡಿಕೊಂಡು ಅದರಂತೆ ಗುಡ್ ವಿಲ್ ಮತ್ತು ಬೆಳೆ ಪರಿಹಾರದ ಸಲುವಾಗಿ ಆರೋಪಿಗೆ ನೀಡಿರುವ ಹಣದ ಮೊತ್ತ ಈ ಪ್ರಕರಣದ ವಿವಾದಿತ ಮೊತ್ತವಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿಯ ಜಮೀನಿನಲ್ಲಿ ಒಟ್ಟು 5 ಪೈಪ್ ಲೈನ್ ಗಳ ಕಾಮಗಾರಿಯಾಗಿದ್ದು, 2 ಪೈಪ್ ಲೈನ್ ಗಳು ನಮ್ಮ ಕಂಪನಿಗೆ ಸೇರಿದಾಗಿರುತ್ತದೆ. ಉಳಿದ 3 ಮೇಘ ಇಂಜಿನಿಯರ್ಸ್ ಮತ್ತು ತೇಜ ಬಿಲ್ಡರ್ಸ್ ರವರು ಅಳವಡಿಸಿದಂತಹ ಪೈಪ್ ಲೈನ್ ಆಗಿರುತ್ತದೆ. ಮೇಘ ಇಂಜಿನಿಯರ್ಸ್ ಮತ್ತು ತೇಜ ಬಿಲ್ಡರ್ಸ್ ರವರು ಕೂಡ ಆರೋಪಿಯ ವಿರುದ್ದ ಚೆಕ್ ಅಮಾನ್ಯ ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿ. 3 ಕಂಪನಿಗಳು ಆರೋಪಿಗೆ ನೀಡಿರುವ ಮೊತ್ತ ಗುಡ್ ವಿಲ್ ಮತ್ತು ಬೆಳೆ ಪರಿಹಾರದ ಮೊತ್ತವಾಗಿರುತ್ತದೆ ಎಂರದೆ ಸರಿಯಲ್ಲ. ಕೆಲಸ ಮುಗಿಯುವವರಗೂ ಆರೋಪಿ ಯಾವುದೇ ರೀತಿ ತೊಂದರೆ ಮಾಡಬಾರದೆಂಬ ಉದ್ದೇಶದಿಂದ ಪಿರ್ಯಾದುದಾರರು ಮತ್ತು ಮೇಘ ಇಂಜಿನಿಯರ್ಸ್ ಮತ್ತು ತೇಜ ಬಿಲ್ಡರ್ಸ್ ರವರು ಭದ್ರತೆಗಾಗಿ ಖಾಲಿ ಚೆಕ್ ಮತ್ತು ಸ್ಟಾಂಪ್ ಪೇಪರ್ ಗಳನ್ನು ಆರೋಪಿಯಿಂದ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಆರೋಪಿಯ ಜಾಗವನ್ನು ಭೂಸ್ವಾಧೀನಪಡಿಸಿಕೊಂಡ ನಂತರ ಪೈಪ್ ಲೈನ್ ಅಳವಡಿಕೆ ಮಾಡಲು ಹೆಚ್ಚುವರಿಯಾಗಿ ಜಾಗದ ಅವಶ್ಯಕತೆ ಇದುದರಿಂದ ಅದರ ಅಕ್ಕಪಕ್ಕದಲ್ಲಿದ್ದ ಉಳಿದ ಜಮೀನುಗಳನ್ನು ಸಹ ಸ್ವಾಧೀನಪಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಹೆಚ್ಚುವರಿ ಜಾಗದಲ್ಲಿ ಕೆಲಸ ಮಾಡಬಾರದೆಂದು ಆರೋಪಿಯು ಪಿರ್ಯಾದುದಾರರಾಗಿ ತಾಕೀತು ಮಾಡಿರುತ್ತಾರೆ ಎಂದರೆ ಸರಿಯಲ್ಲ. 2016 ರಲ್ಲಿ ಕಾಮಗಾರಿಯನ್ನು ಪ್ರಾರಂಭ ಮಾಡಿ 2021 ರಲ್ಲಿ ಅದನ್ನು ಪೂರ್ಣಗೊಳಿಸಿರುತ್ತೇವೆ. ಹೆಚ್ಚುವರಿ ಜಮೀನಿಗೆ ಸಂಬಂದಪಟ್ಟಂತೆ 2019 ಜನವರಿಯಲ್ಲಿ ಆರೋಪಿ ಮತ್ತು ಪಿರ್ಯಾದುದಾರರ ನಡುವೆ ಜಗಳ ಆಗಿರುತ್ತದೆ ಎಂದರೆ ಸರಿಯಲ್ಲ. ತ್ರಿಪಕ್ಷೀಯ ಕರಾರಿನಂತೆ ಕೆಲಸ ಮುಗಿದಿದ್ದರಿಂದ ತಾನು ಕೊಟ್ಟಿರುವ ಚೆಕ್ ನ್ನು

ವಾಪಸ್ಸು ಕೊಡುವಂತೆ ಆರೋಪಿ ಪಿರ್ಯಾದುದಾರರನ್ನು ಕೇಳಿದ್ದರು ಎಂದರೆ ಸರಿಯಲ್ಲ. ಆರೋಪಿಯು ಪಿರ್ಯಾದುದಾರರ ಬಳಿ ಈ ವಿಚಾರವಾಗಿ ಏನೆಲ್ಲಾ ಮಾತುಕತೆ ಮಾಡಿರುತ್ತಾರೆ ಎಂದು ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿ. ಆದ್ದರಿಂದ ವಿವಾದಿತ ಚೆಕ್ ವ್ಯವಹಾರದ ಬಗ್ಗೆ ಸಾಕ್ಷಿ ಹೇಳಲು ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

ನಮ್ಮ ಪಿರ್ಯಾದಿಯಲ್ಲಿ ಹೇಳಿರುವಂತೆ ಆರೋಪಿಗೆ ಯಾವುದೇ ಸಾಲವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಮತ್ತು ಪಿರ್ಯಾದುದಾರರ ನಡುವೆ ಗುಡ್ ವಿಲ್ ಗೆ ಸಂಬಂದಪಟ್ಟಂತೆ ಆಗಿರುವ ಕರಾರನ್ನು ಹಾಜರುಪಡಿಸಲು ತೊಂದರೆ ಇಲ್ಲ. ಅದನ್ನು ಮುಂದಿನ ಮುದ್ದತ್ ನಲ್ಲಿ ಹಾಜರುಪಡಿಸುತ್ತೇನೆ. ಈ ಹಿಂದೆ ಕೇಳಲಾದಂತಹ ಎಲ್ಲಾ ದಾಖಲೆಗಳನ್ನು ಮುಂದಿನ ಮುದ್ದತ್ ನಲ್ಲಿ ಹಾಜರುಪಡಿಸುತ್ತೇನೆ. ನಾನು ಮುಖ್ಯ ವಿಚಾರಣೆ ಮತ್ತು ಪಿರ್ಯಾದಿಯಲ್ಲಿ ಹೇಳಿದಂತೆ ಯಾವುದೇ ಸಾಲದ ವ್ಯವಹಾರ ನಡೆದಿದ್ದರೆ ಎಲ್ಲಾ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೆ, ಆ ರೀತಿ ಯಾವುದೇ ವ್ಯವಹಾರ ಆಗಿಲ್ಲದಿದ್ದರಿಂದ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಆರೋಪಿ ಮತ್ತು ಪಿರ್ಯಾದುದಾರರ ನಡುವೆ ಪರಿಹಾರಕ್ಕೆ ಸಂಬಂದಪಟ್ಟಂತೆ ಆಗಿರುವಂತಹ ಗಲಾಟೆಯ ಹಿನ್ನಲೆಯಲ್ಲಿ ಆರೋಪಿಯ ಮೇಲೆ ದ್ವೇಷ ಸಾದಿಸಲು ಭದ್ರತೆಗಾಗಿ ಪಡೆದುಕೊಂಡ ಚೆಕ್ ನ್ನು ದುರುಪಯೋಗಪಡಿಸಿಕೊಂಡು ಈ ಸುಳ್ಳು ಪಿರ್ಯಾದನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಸುಳ್ಳು ಪಿರ್ಯಾದನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಿರ್ಯಾದುದಾರರು ನ್ಯಾಯಾಲಯಕ್ಕೆ ಬಂದರೆ ಸತ್ಯ ಸಂಗತಿಗಳು ತಿಳಿಯಬಹುದೆಂಬ ಕಾರಣದಿಂದ ಪ್ರಕರಣದ ಬಗ್ಗೆ ನನಗೆ ಸರಿಯಾಗಿ ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**